| ಕರ್ನಾಟಕ ಸರ್ಕಾರ | | | (ಸಿ.ಆರ್.ಪಿ-67) |
|---|---|---|---|
| ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4 | ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ | | |
| | ಸಿ.ಸಿ ನಂ.4609/2022 | | |
| | | ಸಿ.ಡಬ್ಲ್ಯೂ | 3 |
| | | ಪಿ.ಡಬ್ಲ್ಯೂ | 1 |
| ಸಾಕ್ಷಿದಾರರ ಹೆಸರು | ಬಾಬಾ ಬಿನ್ ಮಿಯಾಸ್ | | |
| ವಯಸ್ಸು | 50 ವರ್ಷ | | |
| ಉದ್ಯೋಗ | ಮರಗೆಲಸ | | |
| ವಾಸಸ್ಥಳ | ಚನ್ನಪಟ್ಟಣ | | |

**ದಿನಾಂಕಃ 03.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸಾಕ್ಷಿಯು ಅಮಾನತ್ತು ಪಂಚನಾಮೆ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅಮಾನತ್ತು ಪಂಚನಾಮೆಯನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಕೋರಿಕೆಯ ಮೇರೆಗೆ ಅನುಮತಿ ನೀಡಲಾಗಿದೆ.**

**ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ದಿಃ 05.03.2022 ರಂದು ಆರೋಪಿತರು ಗೂಡ್ಸ್ ವಾಹನದಲ್ಲಿ 57 ಪ್ಲಾಸ್ಟಿಕ್ ಚೀಲದಲ್ಲಿ ಅಕ್ಕಿಯನ್ನು ತೆಗೆದುಕೊಂಡು ಕಾಳಸಂತೆಯಲ್ಲಿ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದು ಅದನ್ನು ದಾಳಿ ಮಾಡಿದ ಹಿಡಿದ ಕಾಲಕ್ಕೆ ನಾನು ಸಹ ಸ್ಥಳದಲ್ಲಿ ಪೋಲೀಸರ ಜೊತೆ ಹಾಜರಿದ್ದೆನು ಎಂದರೆ ಸರಿಯಲ್ಲ. ಆ ವೇಳೆಗೆ ಪೋಲೀಸರು ನನ್ನ ಸಮಕ್ಷಮ ವಾಹನದ ಭಾವಚಿತ್ರವನ್ನು ತೆಗೆದು ಆರೋಪಿತರನ್ನು ದಸ್ತಗಿರಿ ಮಾಡಿದ್ದರು ಎಂದರೆ ಸರಿಯಲ್ಲ. ಮರುದಿನ ಪೋಲೀಸರು ಸದರಿ ವಿಚಾರದ ಕುರಿತು ನನ್ನ ಸಮಕ್ಷಮ ಚಿಕ್ಕಮಳೂರು ಗ್ರಾಮದಲ್ಲಿ ಇರುವ ಬೆಂಗಳೂರು ಮೈಸೂರು ರಸ್ತೆಯ ಬಳಿ ಇರುವ ಹೆಚ್ ಪಿ ಪೆಟ್ರೋಲ್ ಬಂಕ್ ಎದುರಿನ ರಸ್ತೆಯಲ್ಲಿ ಆರೋಪಿತರಿಂದ ಕೃತ್ಯಕ್ಕೆ ಬಳಸಿದ ವಾಹನ ಮತ್ತು ಅದರಲ್ಲಿ ಇದ್ದ ಅಕ್ಕಿ ಮೂಟೆಗಳನ್ನು ಜಪ್ತುಪಡಿಸಿದ್ದು, ನಾನು ಅದಕ್ಕೆ ಅಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ

ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

**ಪಾಟೀ ಸವಾಲು:** ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು
ಚನ್ನಪಟ್ಟಣ